# ಬಾಪೂಜಿನಗರ ವಾರ್ಡ್ ಸಂಖ್ಯೆ:-134 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯರವರ ಘನ ಅಧ್ಯಕ್ಷತೆಯಲ್ಲಿ ದಿ:-07-11-2020 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ:-134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಮಿತಿಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀ. ಬಿ.ಸಿ. ಶಿವಣ್ಣ ಸ.ಅ | ಕಾರ್ಯದರ್ಶಿ. |
| 3. | ಶ್ರೀ. ಶಿವಕುಮಾರ್ (ಕಂ.ಪ) | ಸದಸ್ಯರು. |
| 4. | ಶ್ರೀ. ದೊಡ್ಡವೀರಪ್ಪ ಸ.ಅ (BWSSB) | ಸದಸ್ಯರು. |
| 5. | ಶ್ರೀ. ಅರುಣ್ ಕುಮಾರ್ ಸ.ಅ (ಬೆಸ್ಕಾಂ) | ಸದಸ್ಯರು. |
| 6. | ಶ್ರೀ. ಮಂಜುನಾಥ್ (ಕೋವಿಡ್-19) | ಸದಸ್ಯರು. |
| 7. | ಶ್ರೀಮತಿ. ಇಂದ್ರಾಣಿ ಸ.ಅ (SWD) | ಸದಸ್ಯರು. |
| 8. | ಶ್ರೀಮತಿ. ಸವಿತ (ಕಿ.ಆ.ಪ) | ಸದಸ್ಯರು. |
| 9. | ಶ್ರೀ. ಜಗದೀಶ್ (ಹಿ.ಆ.ಪ) | ಸದಸ್ಯರು. |
| 10. | ಶ್ರೀ. ಕೆ.ಎಲ್. ಉಮೇಶ್ (ಕೆ.ಪ) | ಸದಸ್ಯರು. |

ವಾರ್ಡಿನ ಕಾರ್ಯದರ್ಶಿಗಳಾದ ಶ್ರೀ.ಬಿ.ಸಿ.ಶಿವಣ್ಣ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

ಈ ದಿನ 12.00 ಘಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು ಕಾರ್ಯದರ್ಶಿಯಾವರು ಸಭೆಗೆ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

1. <u>BWSSB</u> ಹಿಂದಿನ ಸಭೆಯಲ್ಲಿ ಚರ್ಚಿಸಲಾದ London Bridge ಬಳಿ MP Steel ಹತ್ತಿರದ Manhole ದುರಸ್ತಿ ಕಾರ್ಯವನ್ನು ಪ್ರಾರಂಭಿಸಿ ಅಲ್ಲಿ Jet Machine ನಿಂದ ಕಾರ್ಯನಿರ್ವಹಿಸಲಾಗದ ಕಾರಣ ಈ ವಾರದಲ್ಲಿ ಅಲ್ಲಿನ ಸಮಸ್ಯೆಯನ್ನು ಪರಿಹರಿಸಿಕೊಡುವುದಾಗಿ AE ಶ್ರೀ. ದೊಡ್ಡವೀರಪ್ಪ ರವರು ತಿಳಿಸಿದರು.
   ಬಾಪೂಜಿನಗರ 3ನೇ ಕ್ರಾಸ್ ನಲ್ಲಿ BWSSB Manhole ಒಡೆದಿದ್ದು, ಅದನ್ನು ಸರಿಪಡಿಸಲು ಟೆಂಡರ್ ಕರೆದಿದ್ದು ಹೊಸದಾಗಿ ಕಟ್ಟಿಕೊಡುವುದಾಗಿ ತಿಳಿಸಿದರು.

2. <u>BESCOM</u> ಬಾಪೂಜಿನಗರದಲ್ಲಿ ಎಲ್ಲಾ ರಸ್ತೆಗಳಲ್ಲಿಯ Under Ground Cable ಗಳನ್ನು ಅಳವಡಿಸುವ ಕಾಮಗಾರಿಯ ಅಂದಾಜು ಪಟ್ಟಿಗಳನ್ನು ಅನುಮೋದನೆಗಾಗಿ ಸಲ್ಲಿಸಿದ್ದು, ಅನುಮೋದನೆಯಾದ ನಂತರ Tender process ನಡೆಸಿ, ಕಾಮಗಾರಿ ಪ್ರಾರಂಭಿಸುವುದಾಗಿ BESCOM AE ಶ್ರೀ.ಅರುಣ್ ಕುಮಾರ್ ರವರು ತಿಳಿಸಿದರು.
3. <u>SWD</u> ಸ.ಅ ಶ್ರೀಮತಿ. ಇಂದ್ರಾಣಿಯವರು 'A' Street ನಲ್ಲಿನ ರಸ್ತೆಗೆ SWD ಯ ವೃಷಭಾವತಿ ನಾಲೆಯ ಒತ್ತುಗೋಡೆಗೆ Bend Pipe ಅಳವಡಿಸುವ ಬಗ್ಗೆ, ಮಾರುಕಟ್ಟೆಯಲ್ಲಿ Bend Pipe ಗಳು ಲಭ್ಯವಿಲ್ಲದ ಕಾರಣ ಸ್ವಲ್ಪ ಕಾಲವಕಾಶ ತೆಗೆದುಕೊಂಡು ಮಾಡಿಕೊಡುವುದಾಗಿ ತಿಳಿಸಿದರು.
4. <u>REVENUE</u> ಶ್ರೀ.ಶಿವಕುಮಾರ್ RI ರವರು Tax Collection ಬಗ್ಗೆ ವಿವರಿಸಿದರು ಹಿಂದಿನ ವಾರದಲ್ಲಿ ಅಂದಾಜು ರೂ: 4.31 ಲಕ್ಷಗಳು ತೆರಿಗೆ ಸಂಗ್ರಹಿಸಿರುವುದಾಗಿ ತಿಳಿಸಿದರು. ಇನ್ನು ಹೆಚ್ಚಿನ ತೆರಿಗೆ ಸಂಗ್ರಹಿಸುವಂತೆ ಅಧ್ಯಕ್ಷರು ಸೂಚಿಸಿದರು.

5. **ENGINEERING** ಶ್ರೀ.ಬಿ.ಸಿ.ಶಿವಣ್ಣ ರವರು ವಾರ್ಡ್‌ನಲ್ಲಿ Silt & Tractor ತೆರವುಗೊಳಿಸುವ ಕಾಮಗಾರಿಯನ್ನು ಕೈಗೊಳಬೇಕಾಗಿದ್ದು ಪ್ರಸ್ತಾವನೆಯನ್ನು ಮುಖ್ಯ ಅಭಿಯಂತರರು ರವರ ಅನಮೋದನೆಗೆ ಸಲ್ಲಿಸಿದ್ದು, ಅನುಮೋದನೆಯಾದ ನಂತರ Tender process ನಡೆಸಿ, ಕಾಮಗಾರಿಯನ್ನು ಪ್ರಾರಂಭಿಸಿಸುವುದಾಗಿ ತಿಳಿಸದರು. Potholes ಗಳನ್ನು, ಮುಚ್ಚಲು ವಾರ್ಡ್‌ನ ನೋಡಲ್ ಅಧಿಕಾರಿಗಳು ಸೂಚಿಸಿದ್ದು, ಕಾರ್ಯದರ್ಶಿರವರು Potholes ಗನ್ನು ಮುಚ್ಚಲು Hot Mix Asphalt ಸರಬಾರಜು ಮಾಡಲು Indent ನೀಡಿದ್ದು, Asphalt ಸರಬಾರಜುಅದ ತಕ್ಷಣ Potholes ಗನ್ನು ಮುಚ್ಚುವುದಾಗಿ ಶ್ರೀ.ಬಿ.ಸಿ.ಶಿವಣ್ಣ ರವರು ಸಭೆಗೆ ತಿಳಿಸಿದರು.
6. **SWM** ಹಿಂದಿನ ಸಭೆಯಲ್ಲಿನ ನಡೆವಳಿಗಳ ದೂರುಗಳನ್ನು ಪರಿಹರಿಸಿರುವುದಾಗಿ ಸಭೆಗೆ ತಿಳಸಿದರು. ಎಂದಿನಂತೆ ಯಾವುದೇ ದೂರುಗಳಿಲ್ಲದೇ ಕಾರ್ಯನಿರ್ವಹಿಸುತ್ತಿರುವುದಾಗಿ ಶ್ರೀಮತಿ. ಸವಿತ (ಕಿ.ಆ.ಪ) ರವರು ಸಭೆಗೆ ತಿಳಿಸಿದರು. ನೋಡಲ್ ಅಧಿಕಾರಿರವರು ಹಬ್ಬದ ಎಲ್ಲಾ ಕಸವನ್ನು ತೆರವುಗೊಳಿಸಲು ಸೂಚಿಸಿದಾಗ, ಈಗಾಗಲೇ ಸಂಬಂಧಿದ ಕ್ರಮ ವಹಿಸಿರುವುದಾಗಿ ಶ್ರೀಮತಿ. ಸವಿತ (ಕಿ.ಆ.ಪ) ರವರು ಸಭೆಗೆ ತಿಳಿಸಿದರು. Commercial ಕಸದ ಗಾಡಿಯು ವಾರ್ಡ್‌ನಲ್ಲಿ ಕಾರ್ಯನಿರ್ವಹಿಸುತಿಲ್ಲವೆಂದು ತಿಳಿಸಿದರು. PHC ನ ಮೇಲ್ಛವಾಣಿಯ ಮೇಲಿನ ಕಸವನ್ನು ತೆರವುಗೊಳಿಸಿರುವುದಾಗಿ ಸಹ ಸಭೆಗೆ ತಿಳಿಸಿದರು.
7. **HEALTH** ಡಾ||.ಮಂಜುನಾಥ ರವರು ಪ್ರಥಮಿಕ ಆರೋಗ್ಯ ಕೇಂದ್ರದ ಮೇಲ್ಛವಾಣಿಯ ಮೇಲಿನ ಕಸವನ್ನು ತೆರವುಗೊಳಿಸಿರುದಕ್ಕೆ ದನ್ಯವಾದಗಳನ್ನು ಅರ್ಪಿಸಿ, PHCಯ ಎರಡು ರೊಮ್‌ಗಳು ಸೋರುತ್ತಿದ್ದು, ಅದಷ್ಟು ಬೇಗ ಮೇಲ್ಛಾವಣಿಯನ್ನು ಸೋರದಂತೆ ರಿಪೇರಿ ಮಾಡಿಸಲು ಸಭೆಗೆ ಕೋರಿದರು. ಸಂಬಂಧಿದಂತೆ ಅಗತ್ಯ ಕ್ರಮಕೈಗೊಳ್ಳಲು ವಾರ್ಡ್ ಅಭಿಯಂತರರು ರವರಿಗೆ ಅದ್ಯಕ್ಷರು ಸೂಚಿಸಿದರು. ಹಿಂದಿನ ಪಾಕ್ಷಿಕದಿಂದ ಇಲ್ಲಿಯ ವರೆಗು ಅಂದಾಜು 1,300 ಜನರಿಗೆ ಕೋವಿಡ್-19 ಸ್ವಾಪ್ Test ನೆಡಿಸಿರುವುದಾಗಿ ಹಾಗೂ 22 ಜನರಿಗೆ Medical Kit ಗಳನ್ನು ವಿತರಿಸಿರುವುದಾಗಿ ಶ್ರೀ. ಜಗದೀಶ್ (ಹಿ.ಆ.ಪ) ರವರು ಸಭೆಗೆ ತಿಳಿಸಿದರು.
8. ಸಭೆಗೆ ಹಾಜರಾಗದ ಇತರೆ ಇಲಾಖೆಗಳ ಸದಸ್ಯರುಗಳಿಗೆ ಮುಂದಿನ ಸಭೆಗೆ ತಪ್ಪದೆ ಹಾಜರಗಲು ಅದ್ಯಕ್ಷರು ಸೂಚಿಸಿದರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸಿ ವರದಿಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು.

ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 07.11.2020

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂ: 134.